ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ಜಾತಿ ಆಧಾರಿತ ನಿಗಮಗಳ ಸ್ಥಾಪನೆ ಕುರಿತು

ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) -

94 (634) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ರಾಜ್ಯದಲ್ಲಿ ಜಾತಿ ಆಧಾರಿತ ನಿಗಮಗಳನ್ನು ಸ್ಥಾಪನೆ ಮಾಡಿರುವ ಉದ್ದೇಶಗಳೇನು ;

(ಆ) ನಿಗಮಗಳ ಸ್ಥಾಪನೆಯಿಂದ ಜಾತಿವಾರು ಅಭಿವೃದ್ಧಿ ಆಗಿರುವುದನ್ನು, ಆಗದಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಇ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ನಿಗಮಕ್ಕೂ ಮೀಸಲಿಟ್ಟಿರುವ ಅನುದಾನವೆಷ್ಟು ; ಖರ್ಚಾಗಿರುವ ಅನುದಾನವೆಷ್ಟು ;

(ಈ) ಬ್ರಾಹ್ಮಣ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪನೆಯಾದ ವರ್ಷದಿಂದ ಈವರೆಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ ;

(ಉ) ಈ ನಿಗಮದ ಕಾರ್ಯಚಟುವಟಿಕೆಗಳೇನು ; ಅಧ್ಯಕ್ಷರ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳೇನು ?